# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 441+442 |
| 2 | ಸದಸ್ಯರ ಹೆಸರು | : | ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಹಾಗೂ ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 23-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆಯಿಂದ ಪರಿಸರದ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಎನ್.ಜಿ.ಟಿ ಆದೇಶದ ಅನ್ವಯ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬಿ.ಎಸ್.ಡಬ್ಲ್ಯೂ.ಎಂ.ಎಲ್. ವತಿಯಿಂದ ಘನ ತ್ಯಾಜ್ಯ ವಿಲೇವಾರಿ ಘಟಕಗಳ ಬಗ್ಗೆ ಕೈಗೊಂಡ ಕ್ರಮಗಳೇನು; (ಕಳೆದ 5 ವರ್ಷಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ನೀಡಿದ ನಿರ್ದೇಶನಗಳಂತೆ, ಘನತ್ಯಾಜ್ಯ ನಿರ್ವಹಣೆಯನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ನಿರ್ವಹಿಸಲು ಅನುವಾಗುವಂತೆ ಘನತ್ಯಾಜ್ಯ ನಿರ್ವಹಣಾ ನಿಯಮ-2016 ಹಾಗು ಘನತ್ಯಾಜ್ಯ ನಿರ್ವಹಣಾ ಉಪನಿಯಮ-2020 ಗಳನ್ನು ಅಳವಡಿಸಿಕೊಂಡಿರುತ್ತದೆ. ಅದರಂತೆ, ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ಕ್ರಮವಹಿಸಲಾಗುತ್ತಿದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಿಬಿಎಂಪಿ ಒಡೆತನದ ಒಟ್ಟು 7 ತ್ಯಾಜ್ಯ ಸಂಸ್ಕರಣಾ ಘಟಕಗಳಿರುತ್ತವೆ. ಈ ಪೈಕಿ 01 (ಒಂದು) ಘಟಕವಾದ ಸೀಗೆಹಳ್ಳಿ ಘಟಕವು ಸ್ಥಳೀಯರ ವಿರೋಧದಿಂದಾಗಿ ಪ್ರಸ್ತುತ ಸ್ಥಗಿತಗೊಂಡಿರುತ್ತದೆ. ಉಳಿದ 6 ಘಟಕಗಳು ಹಾಗೂ ಒಂದು ಖಾಸಗೀ ಸಂಸ್ಕರಣಾ ಘಟಕವಾದ ಮೆ॥ ಎಂ.ಎಸ್.ಜಿ.ಪಿ ಸಂಸ್ಕರಣಾ ಘಟಕವು ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಕರಣಾ ಘಟಕಗಳಲ್ಲಿ ಪ್ರತಿನಿತ್ಯ 1397 ಮೆಟ್ರಿಕ್ ಟನ್‌ರಷ್ಟು ಘನತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿರುತ್ತದೆ.<br><br>ಬಿಬಿಎಂಪಿ ಒಡೆತನದ ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಕೆಳಕಂಡಂತಿವೆ:<br><br>1) ದೊಡ್ಡಬಿದರಕಲ್ಲು ಸಂಸ್ಕರಣಾ ಘಟಕ.<br>2)ಚಿಕ್ಕನಾಗಮಂಗಲ ಸಂಸ್ಕರಣಾ ಘಟಕ.<br>3)ಕೆ.ಸಿ.ಡಿ.ಸಿ. ಸಂಸ್ಕರಣಾ ಘಟಕ.<br>4)ಲಿಂಗಧೀರನಹಳ್ಳಿ ಸಂಸ್ಕರಣಾ ಘಟಕ.<br>5)ಕನ್ನಹಳ್ಳಿ ಸಂಸ್ಕರಣಾ ಘಟಕ.<br>6) ಸುಬ್ಬರಾಯನಪಾಳ್ಯ ಸಂಸ್ಕರಣಾ ಘಟಕ. |

| | | |
|---|---|---|
| | | ಬಿಬಿಎಂಪಿಗೆ ಸಂಬಂಧಿಸಿದ ಈ ಘನತ್ಯಾಜ್ಯ ನಿರ್ವಹಣೆ ಘಟಕಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಲಾಗುತ್ತಿದೆ.<br>ಕಳೆದ 5 ವರ್ಷಗಳ ಸಂಪೂರ್ಣ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕಳೆದ ಐದು ವರ್ಷಗಳಿಂದ ಪಾಲಿಕೆಯ ಆಡಳಿತ ಹಾಗೂ ಬಿ.ಎಸ್.ಡಬ್ಲ್ಯೂ.ಎಂ.ಎಲ್. ವತಿಯಿಂದ ಘನ ತ್ಯಾಜ್ಯ ನಿರ್ವಹಣೆ, ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆಗೆ ಮತ್ತು ಸಂಸ್ಕರಣ ಘಟಕಗಳ, ಟ್ರಾನ್ಸ್‌ಫರ್ ಸ್ಟೇಷನ್ಸ್ ಹಾಗೂ ಟ್ರಾನ್ಸಿಟ್ ಪಾಯಿಂಟ್ಸ್ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಎಷ್ಟು ಮಾದರಿಯಲ್ಲಿ ಕೈಗೊಳ್ಳಲಾಗಿರುತ್ತದೆ; ಇದರ ಸ್ಥಿತಿಗತಿಗಳ ಬಗ್ಗೆ ಮತ್ತು ವಾರ್ಷಿಕವಾಗಿ ಘನ ತ್ಯಾಜ್ಯ ನಿರ್ವಹಣೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ಸಂಪೂರ್ಣ ಮಾಹಿತಿಯನ್ನು ದಾಖಲಾತಿಯೊಂದಿಗೆ ವರ್ಷವಾರು, ವಲಯವಾರು, ಮೊತ್ತವಾರು ಒದಗಿಸುವುದು) | 2018-19 ಮತ್ತು 2019-20 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಬಿಬಿಎಂಪಿ ವತಿಯಿಂದ ನಿರ್ವಹಿಸುತ್ತಿದ್ದು, ಆ ನಂತರ 2020-21 ನೇ ಸಾಲಿನಲ್ಲಿ 198 ವಾರ್ಡ್‌ಗಳಲ್ಲಿ, ಪೂರ್ವ ವಲಯದ 30 ವಾರ್ಡ್‌ಗಳನ್ನು ಹೊರತುಪಡಿಸಿ (ಘನ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯ ಕಾರಣದಿಂದಾಗಿ) 168 ವಾರ್ಡ್‌ಗಳಿಗೆ ಪ್ರಾಥಮಿಕ ಹಂತದ ಹಸಿ ತ್ಯಾಜ್ಯ ಸಂಗ್ರಹಣೆ ಮತ್ತು ದ್ವಿತೀಯ ಹಂತದ ವಿಲೇವಾರಿ ಕಾರ್ಯಕ್ಕೆ ಸೇವಾದಾರರನ್ನು ನಿಯೋಜಿಸಲು ಟೆಂಡರ್ ಕಾರ್ಯ ನಿರ್ವಹಿಸಲಾಗಿರುತ್ತದೆ. ಅದರಲ್ಲಿ 116 ವಾರ್ಡ್‌ಗಳಲ್ಲಿ ಸೇವಾದಾರರನ್ನು ನಿಯೋಜಿಸುವ ಕಾರ್ಯವನ್ನು ನಿರ್ವಹಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಉಳಿದ ವಾರ್ಡ್‌ಗಳಲ್ಲಿ ಬಿಬಿಎಂಪಿ ವತಿಯಿಂದ ಕಾರ್ಯ ಮುಂದುವರೆಸಲಾಗಿರುತ್ತದೆ. ಒಣ ತ್ಯಾಜ್ಯ ಸಂಗ್ರಹಣಾ ಕಾರ್ಯವನ್ನು ಚಿಂದಿ ಆಯುವವರಿಂದ ನಿರ್ವಹಿಸಲಾಗುತ್ತಿರುತ್ತದೆ.<br><br>ಪ್ರಸ್ತುತ ಸಾಲಿನಲ್ಲಿ ಪಾಲಿಕೆಯ 243 ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡುವ ಸಂಬಂಧ, 89 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಗೊಬ್ಬರ ತಯಾರಿಸುವ ಪ್ರಕ್ರಿಯೆ ಚಾಲಿಯಲ್ಲಿದ್ದು, ಈ ಘಟಕಗಳಲ್ಲಿ ಉತ್ಪತ್ತಿಯಾಗುವ ಲೀಚೆಟ್ ಸಂಸ್ಕರಣೆಗೆ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿರುತ್ತದೆ, ಹಾಗೂ ತ್ಯಾಜ್ಯದಿಂದ ಶಕ್ತಿ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗುತ್ತಿರುತ್ತದೆ.<br><br>ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಥಮಿಕವಾಗಿ ಪ್ರತಿನಿತ್ಯ 25 ಟನ್ ಸಾಮರ್ಥ್ಯದ ಸಣ್ಣ ಪ್ರಮಾಣದ 50 ಟ್ರಾನ್ಸ್‌ಫರ್ |

. . .3/-

| | | |
|---|---|---|
| | | ಸ್ಟೇಷನ್‌ಗಳನ್ನು ಹಾಗೂ ಪ್ರತಿನಿತ್ಯ 150 ಟನ್ ಸಾಮರ್ಥ್ಯದ ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು 3 ಸ್ಥಳಗಳಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ 156 ಎಂಎನ್‌ವೈ 2022, ದಿನಾಂಕ: 29-06-2022 ಅನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br><br>ಘನತ್ಯಾಜ್ಯ ನಿರ್ವಹಣೆಗೆ ಖರ್ಚು ಮಾಡಲಾಗಿರುವ ಮೊತ್ತದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಪಾಲಿಕೆಯ ಎಲ್ಲಾ 243 (ಹಳೆಯ 198) ವಾರ್ಡ್‌ಗಳಿಗೆ ಘನತ್ಯಾಜ್ಯ ವಿಲೇವಾರಿ ಹಾಗೂ ಸಾಗಾಣಿಕೆಗೆ ಈ ಹಿಂದೆ ಗುತ್ತಿಗೆಗೆ ನೀಡಿರುವ ವರ್ಷ ಹಾಗೂ ದಿನಾಂಕ ಮತ್ತು ಕಾರ್ಯಾದೇಶದ ಮಾಹಿತಿ ನೀಡುವುದು ಹಾಗೂ 2022ನೇ ಸಾಲಿನಲ್ಲಿ ಗುತ್ತಿಗೆ ನೀಡಿರುವ ಬಗ್ಗೆ ಮತ್ತು 89 ಪ್ಯಾಕೇಜ್‌ಗಳ ಸ್ಥಿತಿಗತಿಗಳೇನು: (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 168 ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ಈ ಹಿಂದೆ ದಿನಾಂಕ 18.01.2019 ರಲ್ಲಿ ಟೆಂಡರ್ ಆಹ್ವಾನಿಸಿ, ದಿನಾಂಕ 05.08.2020 ರಿಂದ ವಿವಿಧ ದಿನಾಂಕಗಳಂದು ಒಟ್ಟು 116 ವಾರ್ಡ್‌ಗಳಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.<br><br>ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ಹಸಿ, ಒಣ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಸಂಗ್ರಹಿಸಿ, ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕಗಳಿಗೆ ಸಾಗಾಣಿಕೆ ಮಾಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿ ವತಿಯಿಂದ ದಿನಾಂಕ: 28.09.2022 ರಂದು 89 ಪ್ಯಾಕೇಜ್‌ಗಳಾಗಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.<br><br>ಸದರಿ ಟೆಂಡರ್‌ನಲ್ಲಿ 89 ಪ್ಯಾಕೇಜ್‌ಗಳ ಪೈಕಿ 21 ಪ್ಯಾಕೇಜ್‌ಗಳಲ್ಲಿ ಭಾಗವಹಿಸಿದ್ದ ಎಲ್ಲಾ ಬಿಡ್ಡುದಾರರು ತಾಂತ್ರಿಕವಾಗಿ ಅನರ್ಹಗೊಂಡಿರುತ್ತಾರೆ. 43 ಪ್ಯಾಕೇಜ್‌ಗಳಲ್ಲಿ ಏಕೈಕ ಬಿಡ್ಡುದಾರರು ಮಾತ್ರ ತಾಂತ್ರಿಕವಾಗಿ ಅರ್ಹಗೊಂಡಿರುತ್ತಾರೆ. 25 ಪ್ಯಾಕೇಜ್‌ಗಳಲ್ಲಿ ಎರಡಕ್ಕಿಂತ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿರುತ್ತಾರೆ. ಆದರೆ, ಸದರಿ ಟೆಂಡರ್ ನಿಯಮಾವಳಿಯಲ್ಲಿ ಒಂದು ಬಿಡ್ಡುದಾರರಿಗೆ ಕೇವಲ ಒಂದು ಪ್ಯಾಕೇಜ್ ಎಂಬ ಷರತ್ತುಗಳನ್ನು ವಿಧಿಸಲಾಗಿದ್ದರಿಂದ ಕೇವಲ 5 ಪ್ಯಾಕೇಜ್‌ಗಳಿಗೆ ಮಾತ್ರವೇ ಪರಿಗಣಿಸಬಹುದಾಗಿರುತ್ತದೆ. |

..4/-

| | | |
|---|---|---|
| | | ಅದರಂತೆ, ಟೆಂಡರ್ ಪ್ರಕ್ರಿಯೆಯು ಮೊದಲನೇ ಕರೆಯಾಗಿರುವುದರಿಂದ ಹಾಗೂ ತಾಂತ್ರಿಕ ಮೌಲ್ಯಮಾಪನದ ನಂತರ 89 ಪ್ಯಾಕೇಜ್‌ಗಳ ಪೈಕಿ 84 ಪ್ಯಾಕೇಜ್‌ಗಳಿಗೆ ಸ್ಪರ್ಧಾತ್ಮಕ ಬಿಡ್‌ಗಳು ಇಲ್ಲದೇ ಇರುವುದರಿಂದ ಹಾಗೂ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಮತ್ತು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಗಳನ್ನು ಒಳಗೊಂಡಂತೆ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ 2016 ರನ್ವಯ ಕಂಪನಿ ವತಿಯಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ ನೂತನ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಕನಿಷ್ಠ ಒಂದು ವಿಭಾಗದ ವ್ಯಾಪ್ತಿಗೆ ಬರುವ ಎಲ್ಲಾ ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಆದರೆ, ಪ್ರಸ್ತುತ ತಾಂತ್ರಿಕ ಮೌಲ್ಯಮಾಪನದ ನಂತರ ಸ್ಪರ್ಧಾತ್ಮಕ ಬಿಡ್ಡುಗಳಿರುವ 05 ಪ್ಯಾಕೇಜ್‌ಗಳು ವಿವಿಧ ವಿಭಾಗದ ವ್ಯಾಪ್ತಿಗೆ ಭಾಗಶಃ ಬರುವುದರಿಂದ ಎಲ್ಲಾ 89 ಪ್ಯಾಕೇಜ್‌ಗಳಿಗೆ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಿ ದಿನಾಂಕ: 21-01-2023 ರಂದು ಎರಡನೇ ಕರೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ವಿವರವನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ. |
| ಈ) | ಪಾಲಿಕೆಯಿಂದ 25 ಮೆಟ್ರಿಕ್ ಟನ್ ಸಾಮರ್ಥ್ಯದ 50 ಮಿನಿ ಟ್ರಾನ್ಸ್‌ಫರ್ ಸ್ಟೇಷನ್ಸ್ ನಿರ್ಮಿಸಲು ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾವ ದಿನಾಂಕದಂದು ನೀಡಲಾಗಿದೆ; (ಯೋಜನೆಯ ಪ್ರಗತಿ ಹಾಗೂ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಹೌದು. ಪಾಲಿಕೆಯಿಂದ 25 ಮೆಟ್ರಿಕ್ ಟನ್ ಸಾಮರ್ಥ್ಯದ ಮಿನಿ ಟ್ರಾನ್ಸ್‌ಫರ್ ಸ್ಟೇಷನ್ಸ್ ನಿರ್ಮಿಸಲು ಟೆಂಡರ್ ಕರೆದು M/s TPS Infrastructure Limited ಸಂಸ್ಥೆಯವರಿಗೆ ದಿನಾಂಕ: 03-03-2019 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ.<br><br>ಸದರಿ ಯೋಜನೆಯ ಪ್ರಗತಿ ಹಾಗೂ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ವಿವರವನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ. |
| ಉ) | ಪಾಲಿಕೆ ಮತ್ತು ಬಿ.ಎಸ್.ಡಬ್ಲ್ಯೂ.ಎಂ.ಎಲ್. ವತಿಯಿಂದ 150 ಮೆಟ್ರಿಕ್ ಸಾಮರ್ಥ್ಯದ 03 ಟ್ರಾನ್ಸ್‌ಫರ್ ಸ್ಟೇಷನ್ಸ್ ಮಾಡುವ ಯೋಜನೆಯನ್ನು | ಹೌದು. ಸರ್ಕಾರದ ಆದೇಶ ಸಂಖ್ಯೆ: ನಅಇ 150 ಎಂಎನ್‌ವೈ 2019, ದಿನಾಂಕ: 04-11-2019ರ "ಶುಭ್ರ ಬೆಂಗಳೂರು" ಕ್ರಿಯಾಯೋಜನೆಯಡಿ ಪಾಲಿಕೆಯ ವ್ಯಾಪ್ತಿಯಲ್ಲಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಅನುಷ್ಠಾನಗೊಳಿಸಲು ರೂ40.00 ಕೋಟಿಗಳನ್ನು ಮೀಸಲಿರಿಸಲಾಗಿರುತ್ತದೆ. ಅದರಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೂರು ಬಿಡ್‌ದಾರರು ಭಾಗವಹಿಸಿರುತ್ತಾರೆ. |

. . .5/-

| | | |
|---|---|---|
| | ಕೈಗೆತ್ತಿಕೊಳ್ಳಲಾಗಿದೆಯೇ; ಈ ಯೋಜನೆಗೆ ಸರ್ಕಾರದ ಆದೇಶವಿದೆಯೇ; ಟೆಂಡರ್ ಕರೆದ ಸಮಯದಲ್ಲಿ ಎಷ್ಟು ಗುತ್ತಿಗೆದಾರರು ಭಾಗವಹಿಸಿದ್ದರು ಆರ್‌ಎಫ್‌ಪಿ ಪ್ರಕಾರ Unconditional credit line certificate ನ್ನು ಟೆಂಡರ್ ಸಲ್ಲಿಸುವ ಸಮಯದಲ್ಲಿ ಸಲ್ಲಿಸಿರುತ್ತಾರೆಯೇ; ಟೆಂಡರ್ ಅಧಿಸೂಚನೆಯ ಪ್ರಕಾರ ಆಯ್ಕೆಯಾದ ಗುತ್ತಿಗೆದಾರರು ತಾಂತ್ರಿಕ ಹಾಗೂ ಆರ್ಥಿಕವಾಗಿ ಅರ್ಹತೆ ಹೊಂದಿರುತ್ತಾರೆಯೇ; (ಹೊಂದಿದ್ದಲ್ಲಿ ಟೆಂಡರ್‌ದಾರರನ್ನು ಆಯ್ಕೆ ಮಾಡಲು ನಿರ್ವಹಿಸಿರುವ ಕ್ರಮದ ಬಗೆಗಿನ ಸಂಪೂರ್ಣ ದಾಖಲಾತಿಯನ್ನು ಒದಗಿಸುವುದು) | ಸದರಿ ಟೆಂಡರ್‌ನ ಆರ್‌ಎಫ್‌ಪಿ ದಸ್ತಾವೇಜಿನಲ್ಲಿ "Liquid assets and / or availability of credit line facilities not less than Rs.2700.00 Lakhs to be submitted" ಎಂಬುದಾಗಿದ್ದು "in case of Consortium the technical and financial capacity of the lead member and the other member of the consortium will be considered" ಎಂಬುದಾಗಿರುತ್ತದೆ.<br><br>ಅಂದರೆ, ಬಿಡ್‌ದಾರನು ರೂ.2700.00 ಲಕ್ಷ ಮೊತ್ತದ Liquid assets ಗಳನ್ನು ಸಲ್ಲಿಸಬಹುದಾಗಿರುತ್ತದೆ ಅಥವಾ ಇವೆರಡನ್ನೂ ನೀಡಬಹುದಾಗಿರುತ್ತದೆ. ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಬಿಡ್‌ದಾರರು ರೂ.2700.00 ಲಕ್ಷಗಳ Unconditional Liquid assets ಮತ್ತು Conditional credit line facility ದಾಖಲಾತಿಗಳನ್ನು ನೀಡಿರುತ್ತಾರೆ.<br><br>ಸದರಿ ಬಿಡ್‌ದಾರರು ತಾಂತ್ರಿಕವಾಗಿ ಸಲ್ಲಿಸಿದ ರೂ.2700.00 ಲಕ್ಷಗಳ Unconditional Liquid assets ಗಳು ಆರ್.ಎಫ್.ಪಿ ದಸ್ತಾವೇಜಿನ ಷರತ್ತುಗಳನ್ನು ಪೂರೈಸಿದ್ದುದರಿಂದ Conditional credit line facility ದಾಖಲಾತಿಯನ್ನು ಪರಿಗಣಿಸದೆಯೂ ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ವಿವರವನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ. |
| ಊ) | ಪಾಲಿಕೆಯ ವಾರ್ಡ್ ಸಂಖ್ಯೆ: 72 ಮತ್ತು 129 ರಲ್ಲಿ ಬರುವ ಜಮ್ನಾಲಾಲ್ ಬಜಾಜ್ ನಿವೇಶನಕ್ಕೆ ಹೊಂದಿಕೊಂಡಂತೆ ಇರುವ ಪಾದಾಚಾರಿ ಮತ್ತು Margin Land ಮಾಗಡಿ ರಸ್ತೆಗೆ ಮುಖವಾಗಿ ನಿರ್ಮಾಣಗೊಂಡಿರುವ ತಗಡುಗಳ (ಬ್ಯಾರಿಕೇಟಿಂಗ್) ಕಾಮಗಾರಿಯನ್ನು ಪಾಲಿಕೆ ಅಥವಾ ಬಿ.ಎಸ್.ಡಬ್ಲ್ಯೂ.ಎಂ.ಎಲ್. ವತಿಯಿಂದ ನಿರ್ಮಿಸಲಾಗಿದೆಯೇ; ಹಾಗಿದ್ದಲ್ಲಿ ಯಾವ | ಬಿಬಿಎಂಪಿಯ ವಾರ್ಡ್ ಸಂಖ್ಯೆ: 72 ಮತ್ತು 129 ರಲ್ಲಿ ಬರುವ ಜಮ್ನಾಲಾಲ್ ಬಜಾಜ್ ನಿವೇಶನಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆಯ ಜಾಗದಲ್ಲಿ ಟ್ರಾನ್ಸ್‌ಫರ್ ಪಾಯಿಂಟ್‌ಗೆ ತಗಡುಗಳ ಬ್ಯಾರಿಕೇಡಿಂಗ್ ಕಾಮಗಾರಿಯನ್ನು ಬಿಬಿಎಂಪಿ ವತಿಯಿಂದ ಪ್ರಾರಂಭಿಸಲಾಗಿತ್ತು. ಆದರೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ನ್ಯಾಯಾಂಗ ನಿಂದನಾ ಪ್ರಕರಣ ಸಂಖ್ಯೆ: ಸಿಸಿಸಿ:624/2021 ರಂತೆ ತಡೆಯಾಜ್ಞೆಯಿರುವುದರಿಂದ ಪ್ರಸ್ತುತ ಕಾರ್ಯ ಸ್ಥಗಿತಗೊಂಡಿರುತ್ತದೆ. ವಿವರವನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ. |

| | | |
|---|---|---|
| | ಉದ್ದೇಶಕ್ಕಾಗಿ ನಿರ್ಮಿಸಲಾಗಿದೆ? (ಸಂಪೂರ್ಣ ಮಾಹಿತಿ ಹಾಗೂ ದಾಖಲಾತಿಯನ್ನು ಒದಗಿಸುವುದು) | |

**ಸಂಖ್ಯೆ: ನಅಇ 92 ಎಂಎನ್‌ವೈ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮೋಹನ್ ಕುಮರ್ ಕೊಂಡಜ್ಜಿ ಹಾಗೂ ಶ್ರೀ ಪಿ. ಆರ್ ರಮೇಶ್ ರವರು ಘನತ್ಯಾಜ್ಯ ನಿರ್ವಹಣೆ ಕುರಿತಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 441+442

1) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯಿಂದ ಪರಿಸರದ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಎನ್‌ಜಿಟಿ ಆದೇಶದ ಅನ್ವಯ ಬೆಂಗಳೂರು ಮಹಾನಗರ ಪಾಲಿಕೆಯಿಂದ ಘನತ್ಯಾಜ್ಯ ವಿಲೇವಾರಿ ಹಾಗೂ ಘಟಕಗಳ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದ ಸುಮಾರು 714 ಚ.ಕಿ.ಮೀ ವಿಸ್ತೀರ್ಣ ಪ್ರದೇಶದಲ್ಲಿ ಕಾರ್ಯವ್ಯಾಪ್ತಿ ಹೊಂದಿದ್ದು, ಸದರಿ ಪ್ರದೇಶದಲ್ಲಿ ಅಂದಾಜು 5500 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಎಲ್ಲಾ ಮಾದರಿಯ ಘನತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಗಳ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕಾಗಿ ಪಾಲಿಕೆ ಮತ್ತು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾದ ವಿವಿಧ ಯೋಜನೆಗಳನ್ನು ನಿರ್ದಿಷ್ಟ ಅವಧಿಯೊಳಗೆ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲವಾದ ಕಾರಣ ಸಾರ್ವಜನಿಕರಿಗೆ ಪದೇಪದೇ ಅನಾನುಕೂಲತೆಯಾಗುತ್ತಿರುತ್ತದೆ. ಆದ್ದರಿಂದ, ಘನತ್ಯಾಜ್ಯ ನಿರ್ವಹಣೆಗಾಗಿ ವೃತ್ತಿಪರವಾಗಿ ನಿರ್ವಹಿಸಲ್ಪಡುವ ಸರ್ಕಾರದ ಸ್ವಾಮ್ಯದ ನಿಯಮಿತ ಕಂಪನಿಯನ್ನು ಕಂಪನೀಸ್ ಕಾಯ್ದೆಯಡಿಯಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿಯನ್ನು ಸರ್ಕಾರ ಆದೇಶ ಸಂಖ್ಯೆ: ನಅಇ 256 ಎಂಎನ್‌ವೈ 2020, ದಿನಾಂಕ: 05.03.2021 ರ ರೀತ್ಯಾ ಸ್ಥಾಪಿಸಲಾಗಿರುತ್ತದೆ ಹಾಗೂ ಕಂಪನೀಸ್ ಕಾಯ್ದೆಯಡಿಯಲ್ಲಿ ದಿನಾಂಕ 22.06.2021 ರಲ್ಲಿ ನೊಂದಾಯಿಸಲಾಗಿರುತ್ತದೆ. ಸದರಿ ಕಂಪನಿಯಲ್ಲಿ ಬಿಬಿಎಂಪಿಯ ಪಾಲು ಶೇ. 51 ರಷ್ಟಿದ್ದು, ಇನ್ನುಳಿದ ಶೇ. 49 ರಷ್ಟು ಪಾಲು ರಾಜ್ಯ ಸರ್ಕಾರದ್ದಾಗಿರುತ್ತದೆ.ಅದರಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿ ಜವಾಬ್ದಾರಿ ನೂತನವಾಗಿ ಸೃಜಿಸಲ್ಪಟ್ಟಿರುವ ಕಂಪನಿಯದ್ದಾಗಿರುತ್ತದೆ ಹಾಗೂ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಸ್ವಚ್ಛತಾ ಕಾರ್ಯ ಒಳಗೊಂಡಂತೆ ರಸ್ತೆಗಳ ನೈರ್ಮಲ್ಯ ಕಾಪಾಡುವುದು ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯಿಂದ ಪರಿಸರದ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಎನ್‌ಜಿಟಿ ಆದೇಶದ ಅನ್ವಯ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸರ್ಕಾರ ಕೈಗೊಂಡಿರುವ ಕ್ರಮಗಳು:

- ವಿಂಗಡಿತ ರೂಪದಲ್ಲಿ ಅಂದರೆ ಹಸಿ ತ್ಯಾಜ್ಯ, ಒಣ ತ್ಯಾಜ್ಯ ಮತ್ತು ಗೃಹ ಹಾನಿಕಾರಕ ನೈರ್ಮಲ್ಯ ತ್ಯಾಜ್ಯ ಎಂಬುದಾಗಿ ಘನತ್ಯಾಜ್ಯ ಸಂಗ್ರಹಣೆಗೆ ಯೋಜನೆ ರೂಪಿಸಿ ಅದರಂತೆ ವಿಲೇವಾರಿ ಕೈಗೊಳ್ಳಲಾಗುತ್ತಿದೆ.
- ಕೇಂದ್ರೀಕೃತ ಘಟಕಗಳ ಮೇಲಿನ ತ್ಯಾಜ್ಯದ ಒತ್ತಡ ಕಡಿಮೆಗೊಳಿಸಿ ವಿಕೇಂದ್ರೀಕೃತ ಘನತ್ಯಾಜ್ಯ ಸಂಸ್ಕರಣೆಗೆ ಮಾನ್ಯತೆ - ಈ ನಿಟ್ಟಿನಲ್ಲಿ ವಾರ್ಡ್‌ಗಳಲ್ಲಿ ಲಭ್ಯವಿರುವ ಸ್ಥಳಕ್ಕೆ ಅನುಗುಣವಾಗಿ ಬಯೋ ಮೆಥನೈಸೇಶನ್, ಮತ್ತು ಇತರ ತ್ಯಾಜ್ಯ ಆರ್ಗ್ಯಾನಿಕ್ ವೇಸ್ಟ್ ಜೇನರೇಟರ್, ಒಣತ್ಯಾಜ್ಯ ಸಂಗ್ರಹಣಾ ಘಟಕ, ಅಗ್ರಿಗೇಟರ್ ಸೇಂಟರ್‌ಘಟಕಗಳನ್ನು ನಿರ್ಮಿಸಲಾಗಿದೆ ಹಾಗೂ ಕೆಲವು ಘಟಕಗಳು ನಿರ್ಮಿಸಲಾಗುತ್ತಿದೆ.
- 3R Principles - Reduce, Reuse, Recycle ಈ ನಿಟ್ಟಿನಲ್ಲಿ ಒಣ ತ್ಯಾಜ್ಯ ಸಂಗ್ರಹಣೆಯನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದ್ದು, ಕೇಂದ್ರ ಸರ್ಕಾರದ ಪ್ಲಾಸ್ಟಿಕ್ ನಿಷೇಧ 2016, ತಿದ್ದುಪಡಿ ನಿಯಮ 2021 ಹಾಗೂ ರಾಜ್ಯ

ಸರ್ಕಾರದ ಅದಿಸೂಚನೆ, 2016ರನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡು, ಪ್ಲಾಸ್ಟಿಕ್ ಬಳಕೆಗೆ ದಂಡ ವಿಧಿಸಲಾಗುತ್ತಿದೆ.

- ಕಸದಿಂದ ಉತ್ಪತ್ತಿಯಾಗುವ ಲೀಚೆಟ್‌ನ್ನು ಇಲಾಖೆಯ leachate treatment plant ಗಳಲ್ಲಿ ಹಾಗು ಖಾಸಗಿ ಘಟಕಗಳಲ್ಲಿ ಸಂಸ್ಕರಿಸಲಾಗುತ್ತಿದೆ. ಈ ಹಿಂದೆ ಲೀಚೆಟ್‌ನ್ನು BWSSB Sewage treatment plant ಗಳಲ್ಲಿ ಸಂಸ್ಕರಿಸಲಾಗುತ್ತಿತ್ತು.

**ಘನತ್ಯಾಜ್ಯ ವಿಲೇವಾರಿ ಘಟಕಗಳ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ.**

**ಕೇಂದ್ರೀಕೃತ ಹಸಿ ತ್ಯಾಜ್ಯ ಸಂಸ್ಕರಣಾ ಘಟಕಗಳು:**

- ಘನತ್ಯಾಜ್ಯ ನಿರ್ವಹಣಾ ನಿಯಮ-2016 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಂಸ್ಕರಣಾ ಘಟಕಗಳನ್ನು ವಿಂಗಡಿತ ತ್ಯಾಜ್ಯ ಸಂಸ್ಕರಣೆಗೆ ಮಾತ್ರವೇ ಮೀಸಲಿಡುತ್ತಿದ್ದು, ಮೇಲಿನ ಕೋಷ್ಟಕದಲ್ಲಿ ತಿಳಿಸಿದ ಸಂಸ್ಕರಣಾ ಘಟಕಗಳನ್ನು ಹಸಿ ತ್ಯಾಜ್ಯ ಸಂಸ್ಕರಣೆಗೆಂದೇ ನಿಗದಿಸಲಾಗಿರಿತ್ತದೆ.
- ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಹಸಿ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣಾ ಜವಾಬ್ದಾರಿಯನ್ನು ವಲಯಗಳಿಗೆ ಒಂದರಂತೆ ಏಳು ವಲಯಗಳಿಗೆ ನೀಡಲಾಗಿರುತ್ತದೆ.
- ತ್ಯಾಜ್ಯದಿಂದ ಹೊರಬರುವ ದ್ರವ ತ್ಯಾಜ್ಯ ಅಂದರೆ ಲಿಚೇಟ್ ಸಂಸ್ಕರಣಗೆ ದೊಡ್ಡಬಿದರೇಕಲ್ಲು , ಕನ್ನಹಳ್ಳಿ ಸಂಸ್ಕರಣಾ ಘಟಕಗಳಲ್ಲಿ ಲಿಚೇಟ್ ಟ್ರೀಟ್ಮೆಂಟ್ ಪ್ಲಾಂಟ್‌ಗಳನ್ನು ಅಳವಡಿಸಲಾಗಿದೆ.ಚಿಕ್ಕನಾಗಮಂಗಲ ಸಂಸ್ಕರಣಾ ಘಟಕದಲ್ಲಿ ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

**ವಿಕೇಂದ್ರೀಕೃತ ಹಸಿ ಮತ್ತು ಒಣ ತ್ಯಾಜ್ಯ ಸಂಸ್ಕರಣಾ ಘಟಕಗಳು:**

- ಕೇಂದ್ರೀಕೃತ ಘಟಕಗಳ ಮೇಲೆ ಒತ್ತಡ ಕಡಿಮೆಗೊಳಿಸಲು 13 ಸ್ಥಳಗಳಲ್ಲಿ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆಗಾಗಿ 5 ಟನ್ ಸಾಮರ್ಥ್ಯದ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಲಾಗಿರುತ್ತದೆ.
- ಪಾಲಿಕೆಯ ವ್ಯಾಪ್ತಯಲ್ಲಿ 126 ಒಣತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ

**2) ಘನತ್ಯಾಜ್ಯ ನಿರ್ವಹಣೆಗೆ ಖರ್ಚು ಮಾಡಲಾಗಿದ ಹಣದ ವಿವರಗಳು:**

| ಕ್ರ. ಸಂ | ಅವಧಿ | ಖರ್ಚಾದ ಒಟ್ಟು ಮೊತ್ತ (ರೂ ಕೋಟಿಗಳಲ್ಲಿ) | ಷರಾ |
|---|---|---|---|
| 01. | 2017-18 | 852.04 | ಡಿಪಿಎಸ್ ಪೌರಕಾರ್ಮಿಕರ ವೇತನ ಒಳಗೊಂಡಂತೆ |
| 02. | 2018-19 | 568.60 | |
| 03. | 2019-20 | 445.31 | |
| 04. | 2020-21 | 573.35 | |
| 05. | 2021-22 | 682.34 | |

**3) ಪಾಲಿಕೆಯ ಎಲ್ಲಾ 243 (ಹಳೆಯ 198) ವಾರ್ಡ್‌ಗಳಿಗೆ ಘನತ್ಯಾಜ್ಯ ವಿಲೇವಾರಿ ಹಾಗೂ ಸಾಗಾಣಿಕೆಗೆ ಈ ಹಿಂದೆ ಗುತ್ತಿಗೆಗೆ ನೀಡಿರುವ ವರ್ಷ ಹಾಗೂ ದಿನಾಂಕ ಮತ್ತು ಕಾರ್ಯಾದೇಶದ ಮಾಹಿತಿ ಹಾಗೂ 2022ನೇ ಸಾಲಿನಲ್ಲಿ ಗುತ್ತಿಗೆ ನೀಡಿರುವ ಬಗ್ಗೆ ಮತ್ತು 89 ಪ್ಯಾಕೇಜ್‌ಗಳ ಸ್ಥಿತಿಗತಿಗಳ ಬಗ್ಗೆ ಮಾಹಿತಿ:**

2018-19 ಮತ್ತು 2019-20 ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳಲ್ಲಿ ಪ್ರಾಥಮಿಕ ಘನ ತ್ಯಾಜ್ಯ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯವನ್ನು ಇಲಾಖಾವತಿಯಿಂದ ನಿರ್ವಹಿಸಲಾಗಿರುತ್ತದೆ. 2020-21 ಸಾಲಿನಲ್ಲಿ 198 ವಾರ್ಡ್‌ಗಳಲ್ಲಿ ಪೂರ್ವ ವಲಯದ 30 ವಾರ್ಡ್‌ಗಳನ್ನು ಹೊರತು ಪಡಿಸಿ (ಘನ ನ್ಯಾಯಾಲದ ತಡೆಯಾಜ್ಞೆಯ ಕಾರಣದಿಂದಾಗಿ) 168 ವಾರ್ಡ್‌ಗಳಿಗೆ ಪ್ರಾಥಮಿಕ ಹಂತದ ಹಸಿ ತ್ಯಾಜ್ಯ ಸಂಗ್ರಹಣೆ ಮತ್ತು ದ್ವಿತೀಯ ಹಂತದ ವಿಲೇವಾರಿ ಕಾರ್ಯಕ್ಕೆ ಸೇವಾದಾರರನ್ನು ನಿಯೋಜಿಸಲು ಟೆಂಡರ್ ಕಾರ್ಯ ನಿರ್ವಹಿಸಲಾಗಿದ್ದು, ಅದರಲ್ಲಿ 90 ವಾರ್ಡ್‌ಗಳಲ್ಲಿ ಸೇವಾದಾರರನ್ನು ನಿಯೋಜಿಸುವ ಕಾರ್ಯ ನಿರ್ವಹಿಲಾಗಿದ್ದು, ಉಳಿದ ವಾರ್ಡ್‌ಗಳಲ್ಲಿ ಇಲಾಖಾ ವತಿಯಿಂದ ಕಾರ್ಯ ಮುಂದುವರೆಸಲಾಗಿರುತ್ತದೆ. ಒಣ ತ್ಯಾಜ್ಯ ಸಂಗ್ರಹಣಾ ಕಾರ್ಯವನ್ನು ಚಿಂದಿ ಆಯುವವರಿಂದ ನಿರ್ವಹಿಸಲಾಗುತ್ತಿರುತ್ತದೆ. 2021-22 ಮತ್ತು 2022-23 ರಲ್ಲಿ ಪಾಲಿಕೆಯ 243 ವಾರ್ಡ್‌ಗಳನ್ನು 89 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಟೆಂಡರ್ ಕಾರ್ಯ ನಿರ್ವಹಿಸಲಾಗುತ್ತಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಬಿಬಿಎಸ್ 2022, ಬೆಂಗಳೂರು, ದಿನಾಂಕ: 23.06.2022 ರ ರೀತ್ಯಾ ಬಿಬಿಎಂಪಿ ಯಲ್ಲಿ 243 ವಾರ್ಡ್‌ಗಳನ್ನು ಸೃಜಿಸಿ ಪ್ರತಿ ವಾರ್ಡ್‌ಗಳ ಸಂಖ್ಯೆ, ಅವುಗಳ ಹೆಸರು ಹಾಗೂ ವಾರ್ಡ್ ವ್ಯಾಪ್ತಿಯ ಗಡಿಗಳ ಚಕ್ಕುಬಂಧಿಗಳ ವಿವರಗಳನ್ನೂ ಸಹ ಪ್ರಚುರಪಡಿಸಲಾಗಿರುತ್ತದೆ. ಕಾರ್ಯಾದೇಶದ ವಿವರವನ್ನು ಲಗತ್ತಿಸಿದೆ-**ಅನುಬಂಧ-ಅ**

**4) ಪಾಲಿಕೆಯಿಂದ 25 ಮೆಟ್ರಿಕ್ ಟನ್ ಸಾಮರ್ಥ್ಯದ 50 ಮಿನಿ ಟ್ರಾನ್ಸ್‌ಫರ್ ಸ್ಟೇಷನ್ಸ್ ಯೋಜನೆಯ ಪ್ರಗತಿ ಹಾಗೂ ಸ್ಥಿತಿಗತಿಗಳ ಬಗ್ಗೆ ಮಾಹಿತಿ:**

ಪ್ರಸ್ತುತ ಬಿಬಿಎಂಪಿಯಲ್ಲಿ ಆಟೋ ಟಿಪ್ಪರ್ ವಾಹನಗಳ ಮೂಲಕ ಪಾಲಿಕೆ ವ್ಯಾಪ್ತಿಯ ಮನೆ-ಮನೆಗಳಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ, ಸದರಿ ತ್ಯಾಜ್ಯವನ್ನು ಕಾಂಪ್ಯಾಕ್ಟರ್ ವಾಹನಗಳಿಗೆ ವರ್ಗಾಯಿಸಿ, ಕಾಂಪ್ಯಾಕ್ಟರ್ ವಾಹನಗಳ ಮೂಲಕ ಘನತ್ಯಾಜ್ಯ ಸಂಸ್ಕರಣಾ/ ವಿಲೇವಾರಿ ಘಟಕಗಳಿಗೆ ಸಾಗಾಣಿಕೆ ಮಾಡಲಾಗುತ್ತಿದೆ. ಆಟೋ ಟಿಪ್ಪರ್ ವಾಹನಗಳಿಂದ ಘನತ್ಯಾಜ್ಯವನ್ನು ಕಾಂಪ್ಯಾಕ್ಟರ್ ವಾಹನಗಳಿಗೆ ವರ್ಗಾಯಿಸಲು ನಿರ್ದಿಷ್ಟ ಸ್ಥಳಗಳಿಲ್ಲದ ಕಾರಣ, ರಸ್ತೆ ಬದಿಗಳಲ್ಲಿ ಘನತ್ಯಾಜ್ಯವನ್ನು ವರ್ಗಾಯಿಸಲಾಗುತ್ತಿರುತ್ತದೆ. ಇದರಿಂದಾಗಿ, ರಸ್ತೆಗಳಲ್ಲಿ ಲೀಚೆಟ್ ದ್ರಾವಣವು ಸೋರಿ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೇ ಹಾಗೂ ನಗರ ನೈರ್ಮಲ್ಯವು ಹಾಳಾಗುತ್ತಿರುತ್ತದೆ. ಇದಲ್ಲದೇ, ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿರುತ್ತದೆ. ಸದರಿ ನ್ಯೂನ್ಯತೆಯನ್ನು ಸರಿಪಡಿಸಿ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ -2016 ರ ರೀತ್ಯಾ ದ್ವಿತೀಯ ಹಂತದ ಘನತ್ಯಾಜ್ಯ ಸಂಗ್ರಹಣೆಗಾಗಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲು ಸರ್ಕಾರದ ವತಿಯಿಂದ ಉದ್ದೇಶಿಸಲಾಯಿತು. ಇದಲ್ಲದೇ, ಸದರಿ ಯೋಜನೆಗಳಿಗೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯನ್ನೂ ಸಹ ಪಡೆಯಲಾಗಿರುತ್ತದೆ. ಈ ತರಹದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್‌ನಲ್ಲಿಯೂ ಸಹ ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆ ಹಾಗೂ ಸಂಸ್ಕರಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಸ್ಥಾಪಿಸಲು ಸಲಹೆಯನ್ನು ನೀಡಲಾಗಿರುತ್ತದೆ. ಆದುದರಿಂದ ಸಣ್ಣ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಅಳವಡಿಸಿಕೊಳ್ಳುವ ಯೋಜನೆ ರೂಪಿಸಲಾಗಿರುತ್ತದೆ. ಅದರಂತೆ, ಮೊದಲನೇ ಹಂತದಲ್ಲಿ ಬೆಂಗಳೂರು ನಗರದ ವಿವಿಧ 50 ಆಯ್ದ ಸ್ಥಳಗಳಲ್ಲಿ ಸಣ್ಣ ಪ್ರಮಾಣದ Transfer station ಗಳನ್ನು ನಿರ್ಮಿಸಿ, 7 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲು ದಿನಾಂಕ: 04.12.2017 ರಂದು e-procurement portal ನಲ್ಲಿ ಟೆಂಡರ್ ಆಹ್ವಾನಿಸಿ, ಯಶಸ್ವಿ ಬಿಡ್ಡುದಾರರಾದ M/s TPS Infrastructure Limited ಸಂಸ್ಥೆಯವರಿಗೆ ದಿನಾಂಕ: 03-03-2019 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಬೆಂಗಳೂರು ನಗರದ ವಿವಿಧ 50 ಆಯ್ದ ಸ್ಥಳಗಳಲ್ಲಿ 25 ಮೆ.ಟನ್ ಸಾಮರ್ಥ್ಯದ (ಸಣ್ಣ ಪ್ರಮಾಣದ) Transfer stations ಗಳನ್ನು

ನಿರ್ಮಿಸಿ (ಪ್ರತಿ ಸ್ಥಳಕ್ಕೆ 2 Portable Compactor ಮತ್ತು ಒಂದು Hook loader ಯಂತ್ರಗಳ ಖರೀದಿ ಹಾಗೂ ಸಿವಿಲ್ ಕಾಮಗಾರಿ ಒಳಗೊಂಡಂತೆ), 7 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲು ದಿನಾಂಕ: 04.12.2017 ರಂದು e-procurement portal ನಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರಿನಲ್ಲಿ ಯಶಸ್ವಿ ಬಿಡ್ಡುದಾರರಾದ M/s TPS Infrastructure Limited ಸಂಸ್ಥೆಯವರಿಗೆ ದಿನಾಂಕ: 03-03-2019 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ.

M/s TPS Infrastructure Limited ಸಂಸ್ಥೆಯವರು ಈಗಾಗಲೇ 50 ಸ್ಥಳಗಳ ಪೈಕಿ ಒಟ್ಟು 21 ಸ್ಥಳಗಳಲ್ಲಿ (ವಾರ್ಡ್ ಸಂಖ್ಯೆ: 118, 112, 73, 130, 197, 18, 42, 12, 44, 94, 58, 151, 90, 11, 196, 194, 192, 56, 85 (2 Nos) & 149) ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಿದ್ದು, 3 ಸ್ಥಳಗಳಲ್ಲಿ (ವಾರ್ಡ್ ಸಂಖ್ಯೆ: 13, 14 & 198) ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಕೆ.ಆರ್ ಪುರಂ, ಚಿಕ್ಕಪೇಟೆ, ಸರ್ವಜ್ಞನಗರ, ಗೋವಿಂದರಾಜನಗರ ಮತ್ತು ಆರ್.ಆರ್ ನಗರ ವಿಭಾಗಗಳಲ್ಲಿ ಒಟ್ಟು 8 ಸ್ಥಳಗಳನ್ನು ಗುರುತಿಸಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.

5) **150 ಮೆಟ್ರಿಕ್ ಸಾಮರ್ಥ್ಯದ 03 ಟ್ರಾನ್ಸ್‌ಫರ್ ಸ್ಟೇಷನ್ಸ್‌ಗಳ ಬಗ್ಗೆ ಮಾಹಿತಿ:**

ಸಣ್ಣ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಪ್ರತಿ ವಾರ್ಡ್‌ನಲ್ಲಿ ನಿರ್ಮಾಣ ಮಾಡಲು ಸ್ಥಳದ ಅಭಾವವಿರುವುದರಿಂದ ಹಾಗೂ ಸದರಿ ಸ್ಟೇಷನ್‌ಗಳಿಂದ ಘನತ್ಯಾಜ್ಯ ಸಾಗಾಣಿಕೆ ವೆಚ್ಚದಲ್ಲಿ ಉಳಿತಾಯವಾಗುತ್ತಿರುವುದರಿಂದ, ಪ್ರತಿದಿನ 150 ಮೆ.ಟನ್ ಘನತ್ಯಾಜ್ಯವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡುವ ಸಾಮರ್ಥ್ಯವುಳ್ಳ ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿ, ಈಗಾಗಲೇ 3 ವಿಧಾನಸಭಾ ಕ್ಷೇತ್ರಗಳಾದ ಮಹದೇವಪುರ, ಚಿಕ್ಕಪೇಟೆ ಹಾಗೂ ಬಿ.ಟಿ.ಎಂ ಬಡಾವಣೆಗಳಲ್ಲಿ ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಪ್ರತಿ ಸ್ಥಳಗಳಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಹಾಗೂ ಅದಕ್ಕೆ ಹೊಂದಿಕೊಂಡಿರುವ ಪಕ್ಕದ ವಾರ್ಡ್‌ಗಳಲ್ಲಿನ ದ್ವಿತೀಯ ಹಂತದ ಘನತ್ಯಾಜ್ಯ ಸಂಗ್ರಹಣೆ ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ. ದಿನಾಂಕ:13.10.2021 ರಂದು e-procurement portal ನಲ್ಲಿ ಟೆಂಡರ್ ಆಹ್ವಾನಿಸಿಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೂರು ಬಿಡ್‌ದಾರರು ಭಾಗವಹಿಸಿರುತ್ತಾರೆ. ಟೆಂಡರ್ ದಸ್ತಾವೇಜಿನಲ್ಲಿ ನಿಗಧಿಪಡಿಸಲಾದ ತಾಂತ್ರಿಕ ಮಾನದಂಡಗಳಂತೆ ಸದರಿ ಮೂರು ಬಿಡ್‌ದಾರರು ಸಲ್ಲಿಸಿರುವ ತಾಂತ್ರಿಕ ದಾಖಲಾತಿಗಳನ್ನು ಮೌಲ್ಯ ಮಾಪನ ಮಾಡಲಾಗಿರುತ್ತದೆ.

ದಿನಾಂಕ:16-02-2022 ರಂದು ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕ ಮೌಲ್ಯ ಮಾಪನ ಸಮಿತಿಯ ನಡವಳಿಯಂತೆ 2 ಬಿಡ್‌ದಾರರು ಟೆಂಡರ್ ನಲ್ಲಿ ನಿಗಧಿಪಡಿಸಲಾದ ದಾಖಲೆಗಳು ಹಾಗೂ ಎಲ್ಲಾ ಷರತ್ತುಗಳಿಗೆ ಅನುಗುಣವಾಗಿದ್ದು ತಾಂತ್ರಿಕ ಬಿಡ್ ಗಳನ್ನು ಅಂಗೀಕರಿಸಿ ಅರ್ಹ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲು ತೀರ್ಮಾನಿಸಲಾಗಿರುತ್ತದೆ.

ಸದರಿ ಟೆಂಡರ್‌ನ ಆರ್‌ಎಫ್‌ಪಿ ದಸ್ತಾವೇಜಿನ ಪುಟ ಸಂಖ್ಯೆ:30 ರಲ್ಲಿ "Liquid assets or availability of credit facilities of no less than Rs.2700.00 Lakhs to be submitted " and In case of a consortium, the combined Technical and Financial Capacity of the lead member and the other member of the consortium will be considered ಎಂಬುದಾಗಿದ್ದು, ಸದರಿ ಬಿಡ್‌ದಾರರು Liquid assets ಮತ್ತು credit line ದಾಖಲಾತಿಯನ್ನು ಸಲ್ಲಿಸಿರುತ್ತಾರೆ.

ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ : ನ ಅ ಇ 150 ಎಂ ಎನ್ ವೈ 2019 ದಿನಾಂಕ:04-11-2019ರ ಶುಭ್ರ ಬೆಂಗಳೂರು ಅನುದಾನದ ಕ್ರಿಯಾಯೋಜನೆಯಲ್ಲಿ ರೂ 40.00

ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಗೆ ಘನ ಸರ್ಕಾರದ ಅನುಮೋದನೆಯನ್ನು ಸರ್ಕಾರದ ಆದೇಶ ಸಂಖ್ಯೆ : ನಅಇ 156

ಎಂಎನ್‌ವೈ 2022, ಬೆಂಗಳೂರು ದಿನಾಂಕ 29-06-2022 ರಲ್ಲಿ ನೀಡಲಾಗಿರುತ್ತದೆ. ಸರ್ಕಾರದ ಆದೇಶ ಪ್ರತಿಯನ್ನು ಲಗತ್ತಿಸಿದೆ. ಅನುಬಂಧ-ಆ

6) **ತಾತ್ಕಾಲಿಕ ತಡೆಗೋಡೆ (ಟ್ರಾನ್ಸ್‌ಫರ್ ಪಾಯಿಂಟ್) ಗಳ ಬಗ್ಗೆ ವಿವರ:**

**ಉದ್ದೇಶ:** ಮನೆ ಮನೆಗಳಿಂದ ಆಟೋ ಟಿಪ್ಪರ್‌ಗಳ ಮುಖೇನ ಸಂಗ್ರಹಿಸಿದ ಘನತ್ಯಾಜ್ಯವನ್ನು ಕಾಂಪ್ಯಾಕ್ಟರ್‌ಗಳಿಗೆ ರಸ್ತೆಯ ಬದಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ವರ್ಗಾಹಿಸುವ ಸಂದರ್ಭದಲ್ಲಿ ಘನತ್ಯಾಜ್ಯ ಹೊರಚೆಲ್ಲುವಿಕೆಯ ಮತ್ತು ಸದರಿ ಕೇಂದ್ರಗಳಲ್ಲಿ ವಾಹನಗಳ ಕೆಳಭಾಗದಲ್ಲಿ ಕಸವು ಸಂಗ್ರಹವಾಗುತ್ತಿರುತ್ತದೆ ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿರುತ್ತದೆಂದು ಸಾರ್ವಜನಿಕರು ಆಕ್ಷೇಪಣೆ ವ್ಯಕ್ತಪಡಿಸುತ್ತಿರುತ್ತಾರೆ.

ಘನ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿಯ ಅಧ್ಯಕ್ಷರ ನಿರ್ದೇಶನದಂತೆ ನಗರದ ಸೌಂದರ್ಯ ಕಾಪಾಡಲು ಪಾಲಿಕೆಯು ಎಲ್ಲಾ ವಾರ್ಡ್ ವ್ಯಾಪ್ತಿಯಲ್ಲಿ ದ್ವಿತೀಯ ಹಂತದ ಘನತ್ಯಾಜ್ಯ ಸಾಗಣೆ ಕೇಂದ್ರ(ಟ್ರಾನ್ಸ್‌ಫರ್ ಸ್ಟೇಷನ್)ಗಳನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ.. ಎಲ್ಲಾ ವಾರ್ಡ್‌ಗಳಲ್ಲಿ ಏಕ ಸಮಯದಲ್ಲಿ ದ್ವಿತೀಯ ಹಂತದ ಘನತ್ಯಾಜ್ಯ ಸಾಗಣೆ ಕೇಂದ್ರ(ಟ್ರಾನ್ಸ್‌ಫರ್ ಸ್ಟೇಷನ್)ಗಳನ್ನು ನಿರ್ಮಿಸಲು ಕಷ್ಟಸಾಧ್ಯವಾದುದರಿಂದ ಹಾಲಿಯಿರುವ ದ್ವಿತೀಯ ಹಂತದ ಘನತ್ಯಾಜ್ಯ ಸಾಗಣೆ ಸ್ಥಳಗಳಲ್ಲಿ ತಾತ್ಕಾಲಿಕ ತಡೆಗೋಡೆ (ಟ್ರಾನ್ಸ್‌ಫರ್ ಪಾಯಿಂಟ್‌ಗಳ) ನಿರ್ಮಾಣ ಯೋಜನೆ ರೂಪಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ತಡೆಗೋಡೆಯು ಎಂಎಸ್ ಸ್ಟೀಲ್‌ನಿಂದ ನಿರ್ಮಿತವಾದ ಮತ್ತು ಸ್ಥಳಾಂತರಿಸಬಹುದಾದ ತಾತ್ಕಾಲಿಕ ತಡೆಗೋಡೆ ವ್ಯವಸ್ಥೆಯಾಗಿರುತ್ತದೆ. ಇದರಿಂದ ನಗರದ ದೃಷ್ಯ ಮಾಲಿನ್ಯವನ್ನು(ವಿಷುಯಲ್ ಅಗ್ಲಿನೆಸ್) ತಡೆಗಟ್ಟುವ ಉದ್ದೇಶವಾಗಿರುತ್ತದೆ.

ಮುಖ್ಯ ಆಯುಕ್ತರು
ಬಿಬಿಎಂಪಿ., ಬೆಂಗಳೂರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 441+442ಕ್ಕೆ
ಅನುಬಂಧ – 2

Annexure-4

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 1 | Ward no. 97, Dayanandanagar | 05.08.2020 | M/s Srinivasa Enterprises, Prop. Sri. G Srinivasa Gowda, Door No: 1834, 3rd A Cross, 2nd Stage, D Block, Rajajinagar, Bengaluru – 560 010. | 20 | 3 | 57,298 | 183,330 | 1,433 | 1,697,383 | 20,368,596 |
| 2 | Ward no. 128, Nagarabhavi. | 05.08.2020 | M/s S L N Enterprises, Prop. Sri. H Narasegowda, No: 90, 9th Cross, 3rd Main road, Kamakshipalya, Kaveripura Bengaluru – 560 079. | 18 | 3 | 49,000 | 160,000 | 26,000 | 1,388,000 | 16,656,000 |
| 3 | Ward no. 02, Chowdeshwari | 05.08.2020 | M/s Manjunatheshwara Enterprises, No: 61, 4th Cross, J J R Nagar, Bengaluru - 560 018. | 15 | 2 | 46,666 | 150,666 | 33,666 | 1,034,988 | 12,419,856 |
| 4 | Ward no. 138, Chalavadi Palya. | 05.08.2020 | M/s CPC & Sons, No: 195/14, 7th Main, 2nd Cross, V S Garden, Bengaluru - 560 026. | 14 | 2 | 47,252 | 156,175 | 43,999 | 1,017,877 | 12,214,524 |
| 5 | Ward no. 54, Hoodi | 06.08.2020 | M/s Sri Ganga Facility and Management Services, Prop. Sri. Vishwanatha N, No: 222, 8th D Main, First Block, HRBR Layout, Kalyan Nagar, Bengaluru – 560 043. | 36 | 5 | 49,000 | 168,999 | 2,459 | 2,631,454 | 31,337,448 |
| 6 | Ward no.48, Muneshwara | 06.08.2020 | M/s Sri Ganga Facility and Management Services, Prop. Sri. Vishwanatha N, No: 222, 8th D Main, First Block, HRBR Layout, Kalyan Nagar, Bengaluru – 560 043 | 11 | 0 | 46,798 | 158,868 | 2,499 | 517,277 | 6,207,324 |
| 7 | Ward no. 32, Kavalbyrasandra | 06.08.2020 | M/s Sri Ganga Facility and Management Services, Prop. Sri. Vishwanatha N, No: 222, 8th D Main, First Block, HRBR Layout, Kalyan Nagar, Bengaluru – 560 043. | 14 | 2 | 53,998 | 172,965 | 2,854 | 1,104,756 | 13,257,072 |
| 8 | Ward no. 104, Govindarajanagara. | 06.08.2020 | M/s S L N Enterprises, Prop. Sri. H Narasegowda, No: 90, 9th Cross, 3rd Main road, Kamakshipalya, Kaveripura Bengaluru – 560 079. | 12 | 2 | 54,055 | 174,600 | 28,000 | 1,025,860 | 12,310,320 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 9 | Ward no. 82, Garudacharpalya | 06.08.2020 | M/s M K Agencies, Prop. Sri. M Krishne Gowda, No: 29/2, 5th Cross, Opp BBMP Ward Office, Hoodi, Mahadevapura, Bengaluru – 560 048. | 34 | 3 | 49,500 | 169,000 | 99,000 | 2,289,000 | 27,468,000 |
| 10 | Ward no. 92, Shivajinagara | 06.08.2020 | M/s Sri Venkateshwara Enterprises, Prop. Sri. Naveen Kumar, No: 45, 5th A Cross, 12th Main road, NRI Layout 2nd Phase, Ramamurthy Nagar, Bengaluru – 560 016. | 14 | 0 | 48.108 | 155,394 | 85,000 | 758,512 | 9,102,144 |
| 11 | Ward no. 175, Bommanahalli | 06.08.2020 | M/s Sri Annapoorneshwari Associates, Prop. Sri. H N Roopesh kumar, No: 136/122, 4th Main, 1st Cross, Hongasandra, Begur Main Road, Bengaluru – 560 068. | 20 | 3 | 50,000 | 146,000 | 22,000 | 1,460,000 | 17,520,000 |
| 12 | Ward no. 190, Mangammanapalya | 06.08.2020 | M/s Sri Annapoorneshwari Associates, Prop. Sri. H N Roopesh kumar, No: 136/122, 4th Main, 1st Cross, Hongasandra, Begur Main Road, Bengaluru – 560 068. | 28 | 4 | 49,000 | 135,000 | 20,000 | 1,932,000 | 23,184,000 |
| 13 | Ward no. 191, Singasandra | 06.08.2020 | M/s Sri Annapoorneshwari Associates, Prop. Sri. H N Roopesh kumar, No: 136/122, 4th Main, 1st Cross, Hongasandra, Begur Main Road, Bengaluru – 560 068. | 40 | 5 | 49,000 | 139,000 | 40,000 | 2,695,000 | 32,340,000 |
| 14 | Ward no. 137, Rayapuram | 06.08.2020 | M/s Hemanth Enterprises, Prop. Sri. Hemanth Kumar R, No: 2663/1. 6th B Main, RPC Layout, Hampinagar, Vijayanagara 2nd Stage, Bengaluru – 560 040. | 16 | 2 | 54,056 | 174,600 | 90,000 | 1,304,096 | 15,649,152 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.)- | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 15 | Ward no. 167, Yediyur. | 06.08.2020 | M/s Hemanth Enterprises, Prop. Sri. Hemanth Kumar R, No: 2663/1. 6th B Main, RPC Layout, Hampinagar, Vijayanagara 2nd Stage, Bengaluru – 560 040. | 16 | 0 | 56,054 | 174,600 | 34,050 | 930,914 | 11,170,968 |
| 16 | Ward no. 158, Deepanjalinagara. | 06.08.2020 | M/s Santhosh Kumar.D Enterprises, Prop. Sri. Santhosh Kumar D, No: 65/2, 11th Cross, 2nd Main road, Kamakshipalya, Kaveripura Bengaluru – 560 079 | 23 | 3 | 50,000 | 172,000 | 30,000 | 1,696,000 | 20,352,000 |
| 17 | Ward No: 09, Vidyaranyapura. | 06.08.2020 | M/s Manjunatha Enterprises, No: 106, Gavirevanna Siddeshwara Road, Kyalasanahalli, Shivaram Karanth P O, K R Puram, Bengaluru - 560 030. | 26 | 4 | 53,515 | 172,854 | 90,000 | 2,172,806 | 26,073,672 |
| 18 | Ward no. 15, Dasarahalli | 06.08.2020 | M/s S R S Enterprises, Prop. Sri. R Ranganath, No: 181/C, Indira Nilaya, NTI Layout, 1st Phase, Rajivgandhi Nagara, Kodigehalli, Bengaluru – 560 092. | 19 | 2 | 47,999 | 165,000 | 9,000 | 1,250,981 | 15,011,772 |
| 19 | Ward no. 165, Ganesh Mandir. | 06.08.2020 | M/s OLN Enterprises, Prop. Sri. M Shivakumar, No: 149, 4th Cross, Lalbagh road, K S Garden, Bengaluru – 560 027. | 20 | 2 | 48,919 | 165,000 | 1 | 1,308,381 | 15,700,572 |
| 20 | Ward no.127, Mudalapalya. | 06.08.2020 | M Suresh, No: 278, 6th Cross, Ideal Home Township, RR Nagar, Bengaluru - 560 098. | 18 | 3 | 49,500 | 151,200 | 20 | 1,344,620 | 16,135,440 |
| 21 | Ward no. 157, Gali Anjaneya Temple. | 07.08.2020 | M/s Pradeep R Enterprises, Prop. Sri. Pradeep R, No: 299, 1st Main road, B D A Layout, Pattegarapalya, Bengaluru – 560 079. | 18 | 2 | 47,568 | 153,648 | 25,000 | 1,188,520 | 14,262,240 |
| 22 | Ward no. 161, Hosakerehalli. | 10.08.2020 | Sri. Sathish S, No: 218, 2nd Cross, Nagasandra, Basavanagudi, Bengaluru – 560 028. | 20 | 3 | 52,500 | 167,500 | 20,000 | 1,572,500 | 18,870,000 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 23 | Ward no. 52, K R Pure | 10.08.2020 | M/s Siddeshwara Poultry Breeders, Prop. Sri. Abbenahalli Narayana Gowda Manjunath, No: 825, "SRI HARI", 9th Cross, 10th 'A' Main, Indiranagarar 2nd Stage, Bengaluru – 560 038 | 21 | 3 | 42,000 | 174,000 | 30,000 | 1,434,000 | 17,208,000 |
| 24 | Ward no. 91, Bharathinagara | 10.08.2020 | M/s SLV Traders, No: 213, 1st Floor, Cubbonpet Main road, Bengaluru - 560002. | 20 | 1 | 42,000 | 150,000 | 10,000 | 1,000,000 | 12,000,000 |
| 25 | Ward no. 53, Basavanapura | 10.08 2020 | M/s Siddeshwara Poultry Breeders, Prop. Sri. Abbenahalli Narayana Gowda Manjunath, No: 825, "SRI HARI" 9th Cross, 10th 'A' Main, Indiranagarar 2nd Stage, Bengaluru – 560 038 | 29 | 4 | 44,000 | 174,000 | 18,000 | 1,990,000 | 23,880,000 |
| 26 | Ward no. 01, Kempegowda | 10.08.2020 | M/s Sathya Constructions, Prop. Sri. Rajeshwaran Satheesh, No: 600, Down Bazar Road, Yelahanka, Bengaluru - 560 064. | 19 | 3 | 53,500 | 172,500 | 135,200 | 1,669,200 | 20,030,400 |
| 27 | Ward no. 03, Attur. | 10.08.2020 | M/s Sathya Constructions, Prop. Sri. Rajeshwaran Satheesh, No: 600, Down Bazar Road, Yelahanka, Bengaluru - 560 064. | 29 | 4 | 58,000 | 182,457 | 71,000 | 2,482,828 | 29,793,936 |
| 28 | Ward No. 147, Adugodi | 10.08.2020 | M/s Sri Balaji Enterprises,265, 1st B Main road, Koramangala Village 8th Block, Bengaluru 560 095 | 14 | 2 | 47,568 | 147,011 | 0 | 959,974 | 11,519,688 |
| 29 | Ward no. 156, Srinagara | 10.08.2020 | M/s Manjunatha Enterprises, No: 172, 4th Cross, B Chandrappa Nagar, Adugodi, Bengaluru - 560 030. | 22 | 3 | 54,000 | 171,111 | 54,000 | 1,755,333 | 21,063,996 |
| 30 | Ward no. 144, Siddapura | 10.08.2020 | M/s Manjunatha Enterprises, No: 172, 4th Cross, B Chandrappa Nagar, Adugodi, Bengaluru - 560 030. | 20 | 0 | 44,693 | 148,889 | 0 | 893,860 | 10,726,320 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 31 | Ward no. 51, Vijanapura | 11.08.2020 | M/s High End Constructions, Prop. Sri. Bharath S, No: 47, Ganashraya, A Muniyappa Layout, Ekthanagar Virgonagar Post, K R Puram, Bengaluru - 560 049. | 20 | 3 | 49,000 | 160,000 | 122,000 | 1,582,000 | 18,984,000 |
| 32 | Ward no. 131, Nayandahalli | 11.08.2020 | M/s S L N Enterprises, Prop. Sri. H Narasegowda, No: 90, 9th Cross, 3rd Main road, Kamakshipalya, Kaveripura Bengaluru – 560 079. | 16 | 2 | 52000 | 174600 | 30000 | 1,211,200 | 14,534,400 |
| 33 | Ward No: 141, Azadnagar | 11.08.2020 | M/s CPC & Sons, No: 195/14, 7th Main, 2nd Cross, V S Garden, Bengaluru - 560 026. | 18 | 2 | 47,380.91 | 156,175 | 43,303 | 1,208,509 | 14,502,113 |
| 34 | Ward no. 99, Rajajinagar | 11.08.2020 | M/s Sri Annamma Devi Prasanna, No: 100, 1st Main, 5th Cross, B Chandrappa Nagar, Bannerughatta Road, Adugodi Post, Bengaluru - 560 030. | 20 | 3 | 51,352 | 162,378 | 0 | 1,514,174 | 18,170,088 |
| 35 | Ward no. 146, Lakkasandra | 11.08.2020 | M/s Sri Annamma Devi Prasanna, No: 100, 1st Main, 5th Cross, B Chandrappa Nagar, Bannerughatta Road, Adugodi Post, Bengaluru 560 030. | 15 | 2 | 54,055 | 174,600 | 0 | 1,160,025 | 13,920,300 |
| 36 | Ward no. 169, Byrasandra | 11.08.2020 | M/s Manjunatha Enterprises, No: 172, 4th Cross, B Chandrappa Nagar, Adugodi, Bengaluru - 560 030. | 15 | 2 | 51,000 | 158,002.50 | 0 | 1,081,005 | 12,972,060 |
| 37 | Ward no. 39, Chokkasandra | 13.08.2020 | Sri. G Sunil No: 66, Coconut Avenue Road, Malleshwaram, Bengaluru – 560 003. | 28 | 3 | 56,500 | 180,000 | 135,000 | 2,257,000 | 27,084,000 |
| 38 | Ward no. 100, Basaweshwaranagara | 21.08.2020 | Sri. P Vijay Deva Reddy, No: 09, 14th Main, Venkateshwara Layout, Old Madiwala, Bengaluru - 560068 | 22 | 3 | 44,000 | 160,000 | 149,999 | 1,597,999 | 19,175,988 |
| 39 | Ward no. 142, Sunkenahalli | 14.09.2020 | M/s Surya Chandra Enterprises, Prop. Sri. Raviprasad, No: 280, 17th Cross, Devaraj Urs Nagar,Old Guddadahalli, Bengaluru – 560 026 | 18 | 0 | 56,500 | 190,000 | 30,300 | 1,047,300 | 12,567,600 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 40 | Ward no. 184, Uttarahalli | 15.09.2020 | M/s Nithya Enterprises, Prop. Sri. RADHAKRISHNA HOSADURGA NAYAK, # 686, 10th Cross, Kudlu, AECS Layout A Block, Bengaluru – 560 068. | 35 | 5 | 51,550 | 165,750 | 19,131 | 2,652,131 | 31,825,572 |
| 41 | Ward no. 154, Basavanagudi | 15.09.2020 | Sri. C V Rajanikanth Reddy, No: 20, 14th Main, Venkateshwara Layout, Madiwala, Bengaluru – 560 068 | 22 | 0 | 53,000 | 160,000 | 114,000 | 1,280,000 | 15,360,000 |
| 42 | Ward no. 155, Hanumantha Nagar | 15.09.2020 | Sri. C V Rajanikanth Reddy, No: 20, 14th Main, Venkateshwara Layout, Madiwala, Bengaluru – 560 068 | 23 | 0 | 53,000 | 164,000 | 119,200 | 1,338,200 | 16,058,400 |
| 43 | Ward no. 129, Jnana Bharathi | 15.09.2020 | M/s Associated Human Resource Service Pvt Ltd, No:160, Raashi Complex, 2nd Block, Nagarabhavi 2nd Stage, Bengaluru – 5600 72 | 39 | 4 | 48,900 | 169,000 | 90,000 | 2,673,100 | 32,077,200 |
| 44 | Ward no. 160, Rajarajeshwari Nagar | 19.09.2020 | M/s OLN Enterprises, Prop. Sri. M Shivakumar, No: 149, 4th Cross, Lalbagh road, K S Garden, Bengaluru – 560 027 | 35 | 4 | 56,000 | 178,000 | 16,000 | [illegible] | 32,756,000 |
| 45 | Ward No. 45, Malleshwaram | 19.09.2020 | M/s Sapthagiri Cleaning Services, Sri. S Raju, No: 7, 1st Cross, 24th Main, Puttenahalli,J P Nagar 7th Phase, Bengaluru – 560 078. | 15 | 0 | 48,999 | 161,999 | 92,999 | 827,984 | 9,935,808 |
| 46 | Ward No. 96, Okalipura | 19.09.2020 | M/s Sapthagiri Cleaning Services, Sri. S Raju, No: 7, 1st Cross, 24th Main, Puttenahalli, J P Nagar 7th Phase, Bengaluru – 560 078. | 18 | 3 | 47,999 | 161,999 | 93,999 | 1,443,978 | 17,327,736 |
| 47 | Ward No. 197, Vasanthpura | 22.09.2020 | K N Soundiran, No. 15/1, 1st A Cross, 25th Main, KalappaBlock, Srinagar, Bengaluru - 560050 | 35 | 4 | 47,000 | 150,000 | 59,991 | 2,304,991 | 27,659,892 |
| 48 | Ward No. 130, Ullalu | 22.09.2020 | K N Soundiran, No. 15/1, 1st A Cross, 25th Main, KalappaBlock, Srinagar, Bengaluru - 560050. | 38 | 5 | 44,000 | 150,000 | 59,991 | 2,481,991 | 29,783,892 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 49 | Ward No. 103, Kaveripura | 22.09.2020 | S Girija, No. 15/1, 1st A Cross, 25th Main, KalappaBlock, Srinagar, Bengaluru 560050. | 22 | 3 | 49,000 | 150,000 | 74,999 | 1,602,999 | 19,235,988 |
| 50 | Ward No. 42, Lakshmidevi Nagara | 23.09.2020 | H T Jagadisha, No. 171/2, 2nd Cross, 4th Main road, Kattriguppe East, BSK 3rd Stage, Bengaluru - 560085. | 18 | 2 | 54,055 | 174,600 | 100,958 | 1,423,148 | 17,077,776 |
| 51 | Ward No. 69, Laggere | 23.09.2020 | H T Jagadisha, No. 171/2, 2nd Cross, 4th Main road, Kattriguppe East, BSK 3rd Stage, Bengaluru - 560085. | 25 | 3 | 54,055 | 174,600 | 143,157 | 2,018,332 | 24,219,984 |
| 52 | Ward No. 38, HMT | 23.09.2020 | M N Mayanna Gowda, No: 49, 11th Cross, 2nd Main road, Muneshwara Layout, Laggere, Bengaluru - 560058. | 19 | 2 | 54,055 | 174,600 | 105,050 | 1,481,295 | 17,775,540 |
| 53 | Ward No. 189, Hongasandra | 23.09.2020 | M/s Sri Annapoorneshwari Associates, Prop. Sri. H N Roopesh kumar, No: 136/122, 4th Main, 1st Cross, Hongasandra, Begur Main Road, Bengaluru – 560 068. | 29 | 3 | 52,000 | 161,000 | 25,000 | 2,016,000 | 24,192,000 |
| 54 | Ward No. 05, Jakkuru | 24.09.2020 | Sri. Madhu Sudan S, No: 309, 3rd Main, 3rd Cross, Vinayaka Temple Cross, Kammanahalli Main road, Bengaluru – 560 084 | 26 | 3 | 51,000 | 150,000 | 25,000 | 1,801,000 | 21,612,000 |
| 55 | Ward No. 110, Sampangiramanagara | 28.09.2020 | M/s S L V Traders, Prop. Ramaiah Panduranga, # 213, 1st Floor, Cubbonpet, Bengaluru - 560002 | 34 | 1 | 40,750 | 150,000 | 10,000 | 1,545,500 | 18,546,000 |
| 56 | Ward No. 86, Marathalli | 29.09.2020 | Sri. M Venkatesha, No: 1809, 24th Main, 13th Cross, HSR Layout, Sector-1, Bengaluru - 560102. | 35 | 3 | 44,999 | 144,999 | 99,999 | 2,109,961 | 25,319,532 |
| 57 | Ward No. 173, Jakkasandra | 29.09.2020 | Sri. Karthik N, No: 1417, Near Govt. High School, Begur Road, Bengaluru – 560 068, | 14 | 2 | 44,999 | 144,999 | 79,999 | 999,983 | 11,999,796 |

## Details of Garbage Collection & Transport Work Order Details

| Sl No | Ward No. & Name | Work order Date | Agency Name | As per tender no of vehicles alloted | | Approved tender rate per unit per month (in Rs.) | | | Contract amount per month (in Rs.) | Contract Amount per annum (in Rs.) |
|---|---|---|---|---|---|---|---|---|---|---|
| | | | | Auto tipper | Compactor | Auto tipper | Compactor | Management fee | | |
| 58 | Ward No. 187, Puttenahalli | 29.09.2020 | M/s SHISHIR ASSOCIATES, Prop. Sri. A VIJAYAKUMAR, # F1, 1st Floor, Ananthappa Building, Amruth Nagar Main road, Anjanapura, Bengaluru – 560 062 | 18 | 3 | 55,000 | 175,000 | 100,000 | 1,615,000 | 19,380,000 |
| 59 | Ward No. 136, J J R Nagar | 01.10.2020 | M/s CPT Enterprises, No: 350, 2nd cross, VS garden, JJR Nagar, Bengaluru – 560 026 | 15 | 0 | 56,488 | 182,457 | 25,420 | 872,740 | 10,472,880 |
